## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 352

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 18.02.2022

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಸಾರಿಗೆ ಸಂಸ್ಥೆಯ ಬಸ್ಸುಗಳು ರಾಜ್ಯಾದ್ಯಂತ ಸಂಚರಿಸುವ ಸಮಯದಲ್ಲಿ ಒಂದು ತಿಂಗಳಿನಲ್ಲಿ ಪಾವತಿಸುವ ಟೋಲ್ ಮೊತ್ತವೆಷ್ಟು? (ವಿಭಾಗವಾರು ಬಸ್ಸುಗಳ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು)</td><td>ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ಪಾವತಿಸುತ್ತಿರುವ ಮಾಸಿಕ ಟೋಲ್ ಮೊತ್ತದ ವಿವರ ಈ ಕೆಳಕಂಡಂತಿದೆ:<br>(ರೂ. ಲಕ್ಷಗಳಲ್ಲಿ)<br><table><tr><th>ನಿಗಮ</th><th>ಬಸ್ಸುಗಳ ಸಂಖ್ಯೆ</th><th>ಮಾಸಿಕ ಟೋಲ್ ಮೊತ್ತ</th></tr><tr><td>ಕ.ರಾ.ರ.ಸಾ.ನಿಗಮ</td><td>4261</td><td>664.04</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>417</td><td>66.23</td></tr><tr><td>ವಾ.ಕ.ರ.ಸಾ.ಸಂಸ್ಥೆ</td><td>2696</td><td>285.16</td></tr><tr><td>ಕ.ಕ.ರ.ಸಾ.ನಿಗಮ</td><td>4522</td><td>247.39</td></tr><tr><td>ಒಟ್ಟು</td><td>11896</td><td>1262.82</td></tr></table><br>ವಿಭಾಗವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ</td></tr>
<tr><td>ಆ.</td><td>ಸಾರಿಗೆ ಸಂಸ್ಥೆಯ ಬಸ್ಸುಗಳು ಸರಕಾರಿ ವಾಹನಗಳಾಗಿರುವುದರಿಂದ ಮತ್ತು ಲಾಭ ರಹಿತ ಸೇವಾ ಸಂಸ್ಥೆಯಾಗಿರುವುದರಿಂದ ಟೋಲ್‌ನಿಂದ ವಿನಾಯಿತಿ ಪಡೆಯಲು ಕ್ರಮ ಕೈಗೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ಕ್ರಮ</td><td>ನಾಲ್ಕೂ ಸಾರಿಗೆ ಸಂಸ್ಥೆಗಳು ಸಾರ್ವಜನಿಕ ಸೇವಾ ಸಂಸ್ಥೆಗಳಾಗಿರುವುದರಿಂದ ನಿಗಮಗಳ ಸಾರಿಗೆಗಳಿಗೆ ಟೋಲ್ ಬಳಕೆದಾರರ ಶುಲ್ಕ ಪಾವತಿಯಿಂದ ವಿನಾಯಿತಿಯನ್ನು ನೀಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಕೋರಲಾಗಿ, ಪ್ರಾಧಿಕಾರವು ಟೋಲ್ ಶುಲ್ಕ ಪಾವತಿ ಅಧಿಸೂಚನೆಯಲ್ಲಿ ಯಾವುದೇ ವಿನಾಯಿತಿ ಇಲ್ಲದಿರುವುದಾಗಿ ಹಿಂಬರಹ ನೀಡಿರುತ್ತದೆ.</td></tr>
</table>

| | | |
|---|---|---|
| | ಕೈಗೊಳ್ಳಲಾಗುವುದು; | ಮುಂದುವರೆದು, ಕರ್ನಾಟಕ ರಾಜ್ಯ ವ್ಯಾಪ್ತಿಯ ರಾಜ್ಯ ಹೆದ್ದಾರಿಗಳಲ್ಲಿ ಆಚರಣೆ ಮಾಡುವ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳ ಸಾರಿಗೆಗಳಿಗೆ ಟೋಲ್ ಶುಲ್ಕದಲ್ಲಿ ವಿನಾಯಿತಿ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಲಾಗಿದೆ.<br>**ಬೆಂ.ಮ.ಸಾ.ಸಂಸ್ಥೆಗೆ** ಟೋಲ್ ಶುಲ್ಕದಲ್ಲಿ ವಿನಾಯಿತಿ ನೀಡುವಂತೆ ಕೋರಿ ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾ ರವರಿಗೆ ಮತ್ತೊಮ್ಮೆ ಪತ್ರ ಬರೆಯಲಾಗಿದೆ. ನ್ಯಾಷನಲ್ ಹೈವೇ ಅಥಾರಿಟಿ ಆಫ್ ಇಂಡಿಯಾರವರಿಂದ ಪ್ರತಿಕ್ರಿಯೆ ಸ್ವೀಕರಿಸಿರುವುದಿಲ್ಲ. |
| ಇ. | ಟೋಲ್‌ನಿಂದ ವಿನಾಯಿತಿ ಪಡೆದಲ್ಲಿ ಸದರಿ ಮೊತ್ತವನ್ನು ಸಾರಿಗೆ ಸಂಸ್ಥೆಯ ಉನ್ನತಿಗಾಗಿ ಬಳಸಬಹುದಾಗಿದ್ದು, ಈ ಕುರಿತು ಸರಕಾರದ ನಿಲುವೇನು? | ರಾಜ್ಯದ ನಾಲ್ಕೂ ಸಾರಿಗೆ ಸಂಸ್ಥೆಗಳ ಬಸ್ಸುಗಳಿಗೆ ಟೋಲ್‌ನಿಂದ ವಿನಾಯಿತಿ ನೀಡಿದ್ದಲ್ಲಿ ಪ್ರಯಾಣ ದರ ಕಡಿಮೆಯಾಗಿ ಪ್ರಯಾಣಿಕರಿಗೆ ಹೊರೆ ಕಡಿಮೆಯಾಗುತ್ತದೆ. ಇದರಿಂದ ಪ್ರಯಾಣಿಕರು ಖಾಸಗಿ ವಾಹನಗಳ ಬದಲಾಗಿ ನಿಗಮದ ವಾಹನಗಳಲ್ಲಿ ಪ್ರಯಾಣಿಸುವ ಸಾಧ್ಯತೆ ಇದ್ದು, ನಿಗಮಗಳು ಸಹ ಪುನಶ್ಚೇತನವಾಗಲು ಅನುಕೂಲವಾಗುತ್ತದೆ. |

ಸಂಖ್ಯೆ: ಟಿಡಿ 24 ಟಿಸಿಕ್ಯೂ 2022

**(ಬಿ.ಶ್ರೀರಾಮುಲು)**
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು